


# ಜಿಪ್ ಪೌಚ್ ತಯಾರಿಸಿ

ಈ ವಿಡಿಯೋದಲ್ಲಿ ನೀವು ಜಿಪ್ಪರ್ ಬಳಸಿ ಪೌಚ್ ಮಾಡುವುದು ಹೇಗೆ ಎಂಬುದನ್ನು ಕಲಿಯುತ್ತೀರಿ. ಈ ಪೌಚ್‌ಗಳನ್ನು ಕೈಯಲ್ಲಿ ಹಿಡಿದುಕೊಳ್ಳುವುದು ಬಹಳ ಸುಲಭ.



ಈ ಪೌಚ್ ತಯಾರಿಸಲು ನಿಮಗೆ ಬೇಕಾಗಿರುವುದು – ಸುಮಾರು 13 ಇಂಚು ಉದ್ದದ ಒಂದು ಜಿಪ್, ಕುಣಿಕೆಗಳನ್ನು ಮಾಡಲು ಸುಮಾರು 6ರಿಂದ 8 ಇಂಚು ಉದ್ದದ ರಿಬ್ಬನ್, ಬಟ್ಟೆಗೆ ಮ್ಯಾಚಿಂಗ್ ಬಣ್ಣದ ದಾರವನ್ನು ತುಂಬಿದ ಬಾಬಿನ್, 12 ಇಂಚು ಉದ್ದ ಮತ್ತು 11 ಳ ಇಂಚು ಅಗಲದ ವರ್ಣಮಯ ಬಟ್ಟೆ.

ಈಗ ಪೌಚ್ ತಯಾರುಮಾಡಲು ಪ್ರಾರಂಭಿಸೋಣವೇ?

ಮೊದಲಿಗೆ ಜಿಪ್ ತೆಗೆದುಕೊಂಡು ಬಟ್ಟೆಯ ಅಗಲಕ್ಕೆ ಸರಿಯಾಗಿ ಎರಡೂ ಬದಿಗಳೂ ಒಟ್ಟಿಗೆ ಸೇರುವ ಕಡೆ ಮುಖ ಮಾಡಿ.

ಬಟ್ಟೆಯ ಅಂಚಿನ ಮೇಲೆ ಜಿಪ್‌ನ್ನು ಸರಿಯಾಗಿ ಹೊಂದಿಸಿ. ಅದನ್ನು ಭದ್ರಪಡಿಸಲು ಪಿನ್ನುಗಳನ್ನು ಚುಚ್ಚಿರಿ. ಜಿಪ್ಪರ್ ತೆರೆಯಲು ರನ್ನರ್ ಎಳೆಯಿರಿ. ಜಿಪ್ಪರ್‌ನ ಇನ್ನೊಂದು ಭಾಗವನ್ನು ಬಟ್ಟೆಯ ವಿರುದ್ಧ ಬದಿಯಲ್ಲಿ ಇಡಿ. ಜಿಪ್ಪರ್‌ನ ಅಂಚನ್ನು ಬಟ್ಟೆಯ ಅಂಚಿಗೆ ಸರಿಯಾಗಿ ಹೊಂದಿಸಿ. ಅದನ್ನು ಭದ್ರಪಡಿಸಲು ಪಿನ್ನುಗಳಿಂದ ಚುಚ್ಚಿ.

ಈಗ ಹೊಲಿಗೆ ಯಂತ್ರದ ಬಳಿ ಹೋಗಿ

'ಎ' ಫುಟ್‌ನ್ನು ಜಿಪ್ಪರ್ ಫುಟ್‌ಗೆ ಬದಲಾಯಿಸಿ. ಸೂಜಿಯನ್ನು ಎತ್ತರಿಸಿ ಮತ್ತು ಲಿವರ್ ಮೇಲಕ್ಕೆತ್ತಿ ಪ್ರೆಷರ್ ಫುಟ್ ಮತ್ತು ಕ್ಲಾಂಪ್‌ನ್ನು ರಿಲೀಸ್ ಮಾಡಿ. ಜಿಪ್ಪರ್ ಫುಟ್‌ನ್ನು ಸರಿಯಾದ ಸ್ಥಾನದಲ್ಲಿಟ್ಟು, ಪ್ರೆಷರ್ ಫುಟ್ ಲಿವರನ್ನು ರಿಲೀಸ್ ಮಾಡಿ.

ಈಗ ಜಿಪ್ಪರ್‌ನ ಒಂದು ಭಾಗವನ್ನು ಜಿಪ್ಪರ್ ಫುಟ್‌ನ ಬಲ ಅಂಚಿಗೆ ಸರಿಯಾಗಿ ಹೊಂದಿಸಿ. ಜಿಪ್‌ನ ಹೆಚ್ಚುವರಿ ಭಾಗ ನಿಮ್ಮ ಬಲಕ್ಕಿರಲಿ. ಹೊಲಿಯುವಾಗ ಮಣಿಪಿನ್ನುಗಳನ್ನು ತೆಗೆಯುವುದನ್ನು ಮರೆಯಬೇಡಿ. ಜಿಪ್‌ನ ಅಂಚಿನಲ್ಲಿಯೇ ಬಹಳ ಎಚ್ಚರಿಕೆಯಿಂದ ಹೊಲಿಯಲು ಪ್ರಾರಂಭಿಸಿ. ನೀವು ಹೊಲಿಯುತ್ತಾ ಕೊನೆಯ ಭಾಗಕ್ಕೆ ಬಂದಾಗ ಬಟ್ಟೆಯನ್ನು ಯಂತ್ರದಿಂದ ತೆಗೆದು ದಾರಗಳನ್ನು ಕತ್ತರಿಸಿ.



ಇದೇ ರೀತಿ ಜಿಪ್ಪರ್‌ನ ವಿರುದ್ಧ ಭಾಗವನ್ನೂ ಹೊಲಿಯಿರಿ.

ನೀವು ಹೊಲಿಯುವಾಗ ಅಡ್ಡಬರುವ ಮಣಿಪಿನ್ನುಗಳನ್ನು ತೆಗೆಯುತ್ತಿರಿ. ಈ ಹಂತವನ್ನು ಮುಗಿಸಿದ ಮೇಲೆ ಬಟ್ಟೆಯ ಎರಡೂ ಭಾಗಗಳ್‌ಲ್ಲಿಯೂ ಜಿಪ್ಪರ್ ಇರುವುದನ್ನು ನೋಡಬಹುದು. ರನ್ನರ್ ಎಳೆದು ಜಿಪ್ಪರ್ ಕ್ಲೋಸ್ ಮಾಡಿ. ಬಟ್ಟೆಯ ಮಧ್ಯ ಭಾಗದಲ್ಲಿ ಜಿಪ್ಪರ್ ಬರುವಂತೆ ಬಟ್ಟೆಯನ್ನು ಸಮನಾಗಿ ಮಡಿಸಿ. ವಿಡಿಯೋದಲ್ಲಿ ತೋರಿಸಿರುವಂತೆ ಬಟ್ಟೆಯ ಮಡಿಕೆಗಳನ್ನು ಭದ್ರಪಡಿಸಲು ಪಿನ್ನುಗಳನ್ನು ಚುಚ್ಚಿ.

ಈಗ ರಿಬ್ಬನ್ ತೆಗೆದುಕೊಂಡು ಸುಮಾರು ಎರಡು ಇಂಚು ಉದ್ದದ ಒಂದು ತುಂಡು ಹಾಗೂ ಮೂರು ಇಂಚು ಉದ್ದದ ಇನ್ನೊಂದು ತುಂಡನ್ನು ಕತ್ತರಿಸಿ. ಗಿಡ್ಡ ತುಂಡಿನ ರಿಬ್ಬನ್ನನ್ನು ಮಡಚಿ ಅದರ ತುದಿಯನ್ನು ಬಟ್ಟೆಯ ಮಧ್ಯ ಭಾಗದಲ್ಲಿರುವ ಜಿಪ್‌ನ ತಳದಲ್ಲಿ ಸರಿಯಾಗಿ ಹೊಂದಿಸಿಡಿ. ಅದನ್ನು ಪಿನ್ನುಗಳಿಂದ ಭದ್ರಪಡಿಸಿ. ಇದೇ ರೀತಿ ಉದ್ದನೆಯ ತುಂಡಿನ ರಿಬ್ಬನ್ನನ್ನು ವಿರುದ್ಧ ಭಾಗದಲ್ಲಿ ಇಟ್ಟು ಪಿನ್ನುಗಳಿಂದ ಭದ್ರಪಡಿಸಿ.



ನೀವು ಈಗ ಓಪನ್ ಇರುವ ಎರಡೂ ಭಾಗಗಳನ್ನೂ ಹೊಲಿಯಲು ಸಿದ್ಧರಾಗಿದ್ದೀರಿ.

ಜಿಪ್ಪರ್ ಫುಟ್‌ನ್ನು 'ಎ' ಪ್ರೆಷರ್ ಫುಟ್‌ಗೆ ಬದಲಾಯಿಸಿ. ಸೂಜಿಯನ್ನು ಮೇಲಕ್ಕೆತ್ತಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ನೀವು ಎರಡೂ ಬದಿಯಲ್ಲಿ ಪಿನ್ ಹಾಕಿಟ್ಟಿರುವ ರಿಬ್ಬನ್ ಕುಣಿಕೆಗಳನ್ನು ಹೊಲಿಯಿರಿ ಮತ್ತು ರಿವರ್ಸ್ ಸ್ಟಿಚ್ಚ ಸೆಲೆಕ್ಟರ್ ಬಳಸಿ ರಿವರ್ಸ್ ಸ್ಟಿಚ್ಚನ್ನು ಲಾಕ್ ಮಾಡಿ.

ಈಗ ಬದಿಗಳನ್ನು ಹೊಲಿಯಲು ಶುರುಮಾಡಿ. ಇದೇ ವಿಧಾನವನ್ನು ವಿರುದ್ಧ ದಿಕ್ಕಿನಲ್ಲಿಯೂ ಪುನರಾವರ್ತಿಸಿ. ಈಗ ಬದಿಗಳನ್ನು ಹೊಲಿಯಲು ಶುರುಮಾಡಿ. ಸೂಜಿ ಪ್ಲೇಟಿನಲ್ಲಿ ಅರ್ಧ ಇಂಚಿಗೆ ಗುರುತು ಮಾಡಿಕೊಂಡು ಬಟ್ಟೆಯ ಅಂಚನ್ನು ಸರಿಯಾಗಿ ಹೊಂದಿಸಿಕೊಂಡು ಹೊಲಿಯಿರಿ. ನಂತರ ಸ್ಟಿಚ್ ಲಾಕ್ ಮಾಡಿ. ಈ ಬದಿಯಲ್ಲಿ ಜಿಪ್ಪರ್‌ನ ಅಂಚಿಗೆ ಬರುವವರೆಗೂ ಹೊಲಿಯುತ್ತಾ ಹೋಗಿ. ರಿವರ್ಸ್ ಸ್ಟಿಚ್ ಸೆಲೆಕ್ಟರ್ ಉಪಯೋಗಿಸಿ ಹೊಲಿಗೆಯನ್ನು ಲಾಕ್ ಮಾಡಿ.




ಈಗ ಜಿಪ್ಪರ್‌ನ ಗಟ್ಟಿ ಭಾಗಕ್ಕೆ ಹೋಗಲು ಪ್ರೆಷರ್ ಫುಟ್ ಎತ್ತಿ, ಸೂಜಿಯನ್ನು ಮೇಲಕ್ಕೇರಿಸಿಕೊಳ್ಳಿ. ಮತ್ತೊಂದು ಭಾಗದಲ್ಲಿ ಹೊಲಿಯಲು ಪ್ರಾರಂಭಿಸಿ. ಇದಕ್ಕೂ ಕೂಡಾ ರಿವರ್ಸ್ ಸ್ಟಿಚ್ ಇರಲಿ.



ಬಟ್ಟೆಯ ವಿರುದ್ಧ ತುದಿಯಲ್ಲಿ ಹೊಲಿಗೆ ಮುಂದುವರಿಸಿ. ಇನ್ನೊಂದು ಭಾಗಕ್ಕೆ ಹೋಗಿ ಇದನ್ನೇ ಪುನರಾವರ್ತಿಸಿ. ಇಲ್ಲಿ, ಜಿಪ್ ಬಳಿ ಹೋದಾಗ, ಜಿಪ್ ಓಪನ್ ಮಾಡಿ ಮತ್ತು ಅದರ ಮೇಲೆ ಹಾಯಲು ಅನುಕೂಲವಾಗುವಂತೆ ಸೂಜಿ ಮತ್ತು ಪ್ರೆಷರ್ ಫುಟ್‌ನ್ನು ಮೇಲಕ್ಕೇರಿಸಿ. ಉಳಿದ ದಾರವನ್ನು ಕತ್ತರಿಸಿ ನಿಮ್ಮ ಕೆಲಸದ ಟೇಬಲ್‌ನ ಬಳಿ ಬನ್ನಿ.

ಈಗ ಜಿಪ್ ಪೌಚ್‌ನ ಬದಿಗಳನ್ನು ಒಟ್ಟಿಗೇ ಹೊಲಿಯಬೇಕು. ರಿಬ್ಬನ್‌ಗೆ ಚುಚ್ಚಿದ ಪಿನ್ನುಗಳೂ ಸೇರಿದಂತೆ ಎಲ್ಲಾ ಪಿನ್‌ಗಳನ್ನೂ ತೆಗೆಯಿರಿ.






ಇಲ್ಲಿ ತೋರಿಸಿರುವಂತೆ ಬಟ್ಟೆಯ ಮಡಚಿದ ಬದಿ ಮತ್ತು ಅದಕ್ಕೆ ತಾಗಿರುವ ಹೊಲಿಗೆ ಸಾಲನ್ನು ಸರಿಹೊಂದಿಸಿ, ಒಂದು ಮೂಲೆಯನ್ನು ರಚಿಸಿ. ಮೂಲೆಯನ್ನು ಸಮಪಡಿಸಿಕೊಂಡು ಮೂಲೆಯ ಒಳಭಾಗದಿಂದ ಒಂದೂವರೆ ಇಂಚನ್ನು ಅಳತೆ ಮಾಡಿ ಒಂದು ಗುರುತು ಹಾಕಿ ನೇರವಾಗಿ ಗೆರೆ ಎಳೆಯಿರಿ. ಮಡಚಿರುವುದನ್ನು ಭದ್ರಪಡಿಸಲು ಪಿನ್ನುಗಳನ್ನು ಚುಚ್ಚಿ.

ಉಳಿದ ಮೂರು ಭಾಗಗಳಲ್ಲೂ ಇದೇ ರೀತಿ ಅನುಸರಿಸಿ. ಒಮ್ಮೆ ಎಲ್ಲಾ ನಾಲ್ಕು ಮೂಲೆಗಳನ್ನೂ ಗುರುತು ಹಾಕಿ ಪಿನ್ ಮಾಡಿದ ಮೇಲೆ ಅವುಗಳನ್ನು ಹೊಲಿಯಲು ಸಿದ್ಧರಾಗಿ.

ಗುರುತು ಹಾಕಿರುವ ಬದಿಯನ್ನು ಪ್ರೆಷರ್ ಫುಟ್‌ನ ತಳಭಾಗದಲ್ಲಿ ಸರಿಯಾಗಿ ಹೊಂದಿಸಿಡಿ. ಸ್ಟಿಚ್ ಪ್ಯಾಟರ್ನ್ ಸೆಲೆಕ್ಟರ್‌ನ್ನು 'ಎ' ಗೆ ನಿಗದಿಪಡಿಸಿ. ಸ್ಟಿಚ್ ಲೆಂಗ್ತ್ ಸೆಲೆಕ್ಟರ್‌ನ್ನು 2 ಮತ್ತು 3ರ ಮಧ್ಯಕ್ಕೆ ಇರಿಸಿ. ಸ್ಟಿಚ್ ಲಾಕ್ ಮಾಡಿ ಗೆರೆಯುದ್ದಕ್ಕೂ ಹೊಲಿಯಿರಿ. ಯಂತ್ರವನ್ನು ನಿಲ್ಲಿಸಿ ಬಟ್ಟೆಯನ್ನು ಹೊರತೆಗೆಯಿರಿ.

ಇಲ್ಲಿ ತೋರಿಸಿರುವಂತೆ ಇದನ್ನೇ ಅನುಸರಿಸಿ ಎಲ್ಲಾ ನಾಲ್ಕು ಮೂಲೆಗಳಲ್ಲೂ ಹೊಲಿಯಿರಿ. ಪ್ರತಿ ಬಾರಿಯ ಕೊನೆಯಲ್ಲಿಯೂ ಸ್ಟಿಚ್ ಲಾಕ್ ಮಾಡಲು ಮರೆಯಬೇಡಿ.



ಪಿನ್ನುಗಳನ್ನು ತೆಗೆಯಿರಿ, ಕಾಲು ಇಂಚಿನಷ್ಟು ಬಿಟ್ಟು ಮೂಲೆಗಳನ್ನು ಕತ್ತರಿಸಿ. ಉಳಿದ ಮೂರೂ ಮೂಲೆಗಳಲ್ಲೂ ಇದನ್ನೇ ಅನುಸರಿಸಿ. ಹೆಚ್ಚುವರಿ ಜಿಪ್‌ನ ಎರಡೂ ಬದಿಗಳನ್ನೂ, ಸ್ವಲ್ಪ ಬಿಟ್ಟು ಕತ್ತರಿಸಿ ಹಾಕಿ.

ನೀವೀಗ ಹೆಚ್ಚು ಕಡಿಮೆ ಎಲ್ಲವನ್ನೂ ಪೂರೈಸಿದ್ದೀರಿ. ನಿಧಾನವಾಗಿ ಮೂಲೆಗಳನ್ನು ಸರಿಪಡಿಸಿ ಪೌಚ್ ನಾಜೂಕಾಗಿ ಕಾಣುವಂತೆ ಮಾಡಿ.

ಈಗ ನಿಮ್ಮ ಬಾಕ್ಸ್ ಜಿಪ್ಪರ್ ಪೌಚ್ ಸಿದ್ಧವಾಗಿದೆ. ಎಷ್ಟೊಂದು ಸುಲಭದ ಕೆಲಸ ಅಲ್ಲವಾ?

ವಿವಿಧ ಸೈಜು, ಬಣ್ಣ, ಬಟ್ಟೆಗಳನ್ನು ಬಳಸಿ ಒಂದೊಂದೇ ಪ್ರಯೋಗಗಳನ್ನು ಮಾಡಿ, ನಿಮ್ಮ ಸೃಜನಶೀಲತೆಯನ್ನು ಹೊರಹೊಮ್ಮಿಸಿ.